ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ

**CC.No.1937/2023**

**PW-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಚಿದಂಬರ ಪ್ರಕಾಶ ಕುಲಕರ್ಣಿ |
| ವಯಸ್ಸು | - | 43 ವರ್ಷ |
| ಉದ್ಯೋಗ | - | ವ್ಯವಸ್ಥಾಪಕರು ಮಾನವ ಸಂಪನ್ಮೂಲ ಅಧಿಕಾರಿ<br>ಗೋಕಾಕ ಟೆಕ್ಸಟೈಲ್ ಗೋಕಾಕ |
| ಸಾಕೀನ | - | ಗೋಕಾಕ ಫಾಲ್ಸ |

**ದಿನಾಂಕಃ 19.112024ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ವಕೀಲರಾದ ಶ್ರೀ ವೈ ಜಿ ಡಿ ರವರ ಪರವಾಗಿ ಎಂ ವೈ ಜೆ ರವರಿಂದಃ**

1. ನಾನು ಈ ಪ್ರಕರಣದಲ್ಲಿ ಪಿರ್ಯಾದುದಾರರ ಕಂಪನಿಯ ವ್ಯವಸ್ಥಾಪಕನಾಗಿರುತ್ತೇನೆ. ನಮ್ಮ ಕಂಪನಿಯು ಕಂಪನಿ ಅಧಿನಿಯಮದ ಕೆಳಗಡೆ ನೊಂದಣಿಯಾಗಿರುತ್ತದೆ. ನಮ್ಮ ಗೋಕಾಕ ಟೆಕ್ಸಟೈಲ್ ಲಿಮಿಟೆಡ್ ಮುಖ್ಯ ಶಾಖೆ ಬೆಂಗಳೂರಿನಲ್ಲಿ ಇರುತ್ತದೆ. ನಮ್ಮ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿ ಇ ಓ ರವರು ರಮೇಶ್ ಆರ್ ಪಾಟೀಲ ಇದ್ದು ಅವರು ನನಗೆ ಈ ಪ್ರಕರಣ ಮುಂದುವರೆಸಲು ಅಧಿಕಾರ ನೀಡಿರುತ್ತಾರೆ.

2.ನಮ್ಮ ಕಂಪನಿಯ ಒಂದು ಶಾಖೆ ಗೋಕಾಕಿನಲ್ಲಿ ಇದ್ದು ಸುಮಾರು 137 ವರ್ಷಗಳ ಹಿಂದಿನಿಂದ ಗೋಕಾಕ ಫಾಲ್ಸನಲ್ಲಿ ದಾರ ಮತ್ತು ಬಟ್ಟೆಯನ್ನು ತಯಾರು ಮಾಡುವ ಉದ್ಯೋಗ ಮಾಡುತಿದ್ದು, ನಮ್ಮ ಕಂಪನಿಯಲ್ಲಿ ಕೆಲಸ ಮಾಡುವವರಿಗಾಗಿ ನಮ್ಮ ಕಂಪನಿಯು ಒಟ್ಟು 1,400 ವಸತಿ ಗೃಹಗಳನ್ನು ನಿರ್ಮಿಸಿರುತ್ತದೆ. ಸದರಿ 1,400 ವಸತಿ ಗೃಹಗಳಲ್ಲಿ 1,200 ವಸತಿ ಗೃಹಗಳನ್ನು ನಮ್ಮ ಗೋಕಾಕಿನ ಫಾಲ್ಸ ಶಾಖೆಯಲ್ಲಿರುವ ಕೆಲಸಗಾರರಿಗೆ ನೀಡಿದ್ದು, ಉಳಿದ 200 ವಸತಿ ಗೃಹಗಳನ್ನು ನಮ್ಮ ಕಂಪನಿಯ ಅಧಿಕಾರಿಗಳಿಗೆ ನೀಡಿರುತ್ತಾರೆ. ಸದರಿ ಒಟ್ಟು 1,400 ವಸತಿ ಗೃಹಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸಂಪರ್ಕವನ್ನು ನಮ್ಮ ಕಂಪನಿ ನೀಡಿದ್ದು ಅದರಂತೆ ಉಚಿತ ನೀರಿನ ಸೌಲಭ್ಯವನ್ನು ವಸತಿ ಗೃಹಗಳಿಗೆ ಪೂರೈಸುತ್ತಾ ಬಂದಿರುತ್ತೇವೆ. ವಸತಿ ಗೃಹಗಳಲ್ಲಿ

ವಾಸವಾಗಿರುವ ಕೆಲಸಗಾರರ ಕಡೆಯಿಂದ ತಿಂಗಳ ಬಾಡಿಗೆಯನ್ನು ಪಡೆಯದೆ ಕೇವಲ ಲೈಸನ್ಸ ಫಿ ಎಂದು ಒಂದು ಕೋಣೆಗೆ ಕೇವಲ ರೂ.10/- ರಂತೆ ನಮ್ಮ ಕಂಪನಿ ಪಡೆಯುತ್ತಿರುತ್ತದೆ.

**3.** ನಮ್ಮ ಕಂಪನಿಯ ವಸತಿ ಗೃಹಗಳನ್ನು ಕೆಲಸಗಾರರು ನಮ್ಮ ಕಂಪನಿಯಲ್ಲಿ ಕೆಲಸ ಮಾಡುವವರೆಗೆ ಮಾತ್ರ ಉಪಯೋಗಿಸತಕ್ಕದ್ದಾಗಿರುತ್ತದೆ. ಕೆಲಸಗಾರರು ನಿವೃತ್ತರಾದ ನಂತರ, ಕೆಲಸವನ್ನು ಮಾಡುವದು ಬಿಟ್ಟ ನಂತರ, ಕೆಲಸಗಾರರನ್ನು ನಮ್ಮ ಕಂಪನಿ ವಜಾಗೊಳಿಸಿದ ನಂತರ ವಸತಿ ಗೃಹಗಳನ್ನು ನಮ್ಮ ಕಂಪನಿಗೆ ಮರಳಿ ಕೊಡಬೇಕು ಎನ್ನುವ ನಿಬಂಧನೆಯ ಮೇರೆಗೆ ನಾವು ನಮ್ಮ ಕಂಪನಿಗೆ ಸೇರಿದ ವಸತಿ ಗೃಹಗಳನ್ನು ಕೆಲಸಗಾರರಿಗೆ ಮತ್ತು ಅಧಿಕಾರಿಗಳಿಗೆ ನೀಡಿರುತ್ತೇವೆ.

**4.** ದಿಃ **05.06.1999** ರಂದು ಈ ಪ್ರಕರಣದ ಆರೋಪಿ ನಮ್ಮ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಹೀಗಾಗಿ ನಮ್ಮ ಕಂಪನಿ ಆರೋಪಿಗೆ ವಸತಿ ಗೃಹ ನಂ.**17/09** ವನ್ನು ಮಂಜೂರು ಮಾಡಿರುತ್ತದೆ. ಸದರಿ ಆರೋಪಿಯನ್ನು ನಮ್ಮ ಕಂಪನಿ ಕೆಲಸದಿಂದ ದಿಃ **24.03.2014** ರಂದು ರಾಜೀನಾಮೆ ನೀಡಿರುತ್ತಾರೆ. ನಂತರ ಆರೋಪಿ ನಮ್ಮ ಕಂಪನಿಯಿಂದ ಪಡೆದ ವಸತಿ ಗೃಹವನ್ನು ಇಲ್ಲಿಯವರೆಗೆ ಖಾಲಿ ಮಾಡಿರುವುದಿಲ್ಲ.

**5.** ದಿಃ **24.03.2014** ರಂದು ಆರೋಪಿಯ ರಾಜೀನಾಮೆಯನ್ನು ಅಂಗೀಕರಿಸಿರುವ ದಾಖಲೆಯನ್ನು ಈಗಾಗಲೇ ಹಾಜರುಪಡಿಸಿದ್ದು ಅದನ್ನು ನಿಸಿ-**1** ಎಂದು ಗುರುತಿಸಿದ್ದು, ಈ ದಿನ ಸದರಿ ದಾಖಲೆಯನ್ನು ನಿಪಿ.**1** ಎಂದು, ಆರೋಪಿಯು ರಾಜೀನಾಮೆ ನೀಡಿದ ನಂತರ ನಮ್ಮ ಕಂಪನಿಯವರು ಆರೋಪಿಗೆ ವಸತಿಗೃಹವನ್ನು ಖಾಲಿ ಮಾಡಲು ದಿ.**17.10.2015** ರಂದು ಕಳುಹಿಸಿದ ನೋಟೀಸಿನ ಕಚೇರಿ ಪ್ರತಿಯನ್ನು ಈಗಾಗಲೇ ಹಾಜರುಪಡಿಸಿದ್ದು ಅದನ್ನು ನಿಸಿ-**2** ಎಂದು ಗುರುತಿಸಿದ್ದು, ಈ ದಿನ ಸದರಿ ದಾಖಲೆಯನ್ನು ನಿಪಿ.**2** ಎಂದು, ನಿಪಿ.**3** ರ ನೋಟಿಸು ಆರೋಪಿಗೆ ಜಾರಿಯಾಗದೇ ಮರಳಿ ಬಂದ ಅಂಚೆ ಲಕೋಟೆಯನ್ನು ಈಗಾಗಲೇ ಹಾಜರುಪಡಿಸಿದ್ದು ಅದನ್ನು ನಿಸಿ-**3** ಎಂದು ಗುರುತಿಸಿದ್ದು, ಈ ದಿನ ಸದರಿ ದಾಖಲೆಯನ್ನು ನಿಪಿ.**3** ಎಂದು, ನಿಸಿ.**3** ರ ಅಂಚೆ ಲಕೋಟೆಯಲ್ಲಿರುವ ನೋಟೀಸನ್ನು ಈಗಾಗಲೇ ಹಾಜರುಪಡಿಸಿದ್ದು ಅದನ್ನು ನಿಸಿ-**3**(ಎ)ಎಂದು ಗುರುತಿಸಿದ್ದು, ಈ ದಿನ ಸದರಿ ದಾಖಲೆಯನ್ನು ನಿಪಿ.**3**(ಎ) ಎಂದು,

ದಿ:25.02.2019 ರಂದು ಆರೋಪಿಗೆ ನಮ್ಮ ವಕೀಲರ ಮೂಲಕ ಕಳುಹಿಸಿದ ನೋಟಿಸಿನ ಕಚೇರಿ ಪ್ರತಿಯನ್ನು ಈಗಾಗಲೇ ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಿದ್ದು, ಈ ದಿನ ಸದರಿ ದಾಖಲೆಯನ್ನು ನಿಪಿ.4 ಎಂದು, ನಿಪಿ.4 ರ ನೋಟಿಸು ಆರೋಪಿಗೆ ಜಾರಿಯಾಗದೇ ಮರಳಿ ಬಂದ ಅಂಚೆ ಲಕೋಟೆಯನ್ನು ಈಗಾಗಲೇ ಹಾಜರುಪಡಿಸಿದ್ದು ಅದನ್ನು ನಿಸಿ-5 ಎಂದು ಗುರುತಿಸಿದ್ದು, ಈ ದಿನ ಸದರಿ ದಾಖಲೆಯನ್ನು ನಿಪಿ.5 ಎಂದು, ನಿಸಿ.5 ರ ಅಂಚೆ ಲಕೋಟೆಯಲ್ಲಿರುವ ನೋಟೀಸನ್ನು ಈಗಾಗಲೇ ಹಾಜರುಪಡಿಸಿದ್ದು ಅದನ್ನು ನಿಸಿ-5(ಎ)ಎಂದು ಗುರುತಿಸಿದ್ದು, ಈ ದಿನ ಸದರಿ ದಾಖಲೆಯನ್ನು ನಿಪಿ.5(ಎ) ಎಂದು, ನಮ್ಮ ಕಂಪನಿಯ ಆಡಳಿತಾತ್ಮಕ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳಾದ ರಮೇಶ್ ಆರ್ ಪಾಟೀಲವರು ನನಗೆ ನೀಡಿದ ಅಧಿಕಾರ ಪತ್ರದ ಧೃಡೀಕೃತ ನಕಲನ್ನು ಈಗಾಗಲೇ ಹಾಜರುಪಡಿಸಿದ್ದು ಅದನ್ನು ನಿಸಿ-6 ಎಂದು ಗುರುತಿಸಿದ್ದು, ಈ ದಿನ ಸದರಿ ದಾಖಲೆಯನ್ನು ನಿಪಿ.6 ಎಂದು, ನನಗೆ ನೀಡಿದ ವಿಶೇಷ ಮುಕ್ತಿಯಾರ ನಾಮೆಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.7 ಎಂದು ಗುರುತಿಸಲಾಯಿತು.

6. ಆರೋಪಿಯು ನಮ್ಮ ಕಂಪನಿಯ ಕೆಲಸಕ್ಕೆ ರಾಜೀನಾಮೆ ನೀಡಿದರೂ ಸಹ ಕಾನೂನು ಬಾಹಿರವಾಗಿ ನಮ್ಮ ಕಂಪನಿಗೆ ಸೇರಿದ ವಸತಿ ಗೃಹದಲ್ಲಿ ವಾಸವಾಗಿರುತ್ತಾನೆ.

ಹೀಗಾಗಿ ಆರೋಪಿಯನ್ನು ನಮ್ಮ ವಸತಿ ಗೃಹದಿಂದ ಹೊರಹಾಕಿ ನಮಗೆ ನಮ್ಮ ವಸತಿ ಗೃಹ ಕೊಡಿಸಿಕೊಡಲು ಪ್ರಾರ್ಥನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾ.ದಂ., ಗೋಕಾಕ.